ಅ) ಹಾಗಿದ್ದಲ್ಲಿ ಕಾಳಸಂತೆಯಲ್ಲಿ ಸೀಮೆಎಣ್ಣೆ ಮಾರಾಟ ಮಾಡುವವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಸೀಮೆಎಣ್ಣೆ ಅಭಾವವು ಅಷ್ಟೊಂದು ಇರುವುದಿಲ್ಲ, ರಾಜ್ಯಕ್ಕೆ ತಿಂಗಳಿಗೆ ಬೇಕಾಗಿರುವ ಸೀಮೆಎಣ್ಣೆಯ ಪ್ರಮಾಣವು 67,000 ಕೆ.ಎಲ್. ಆಗಿರುತ್ತದೆ. ಆದರೆ ಕೇಂದ್ರವು ಕೇವಲ 45,735 ಕೆ.ಎಲ್.ಅನ್ನು ಮಾತ್ರ ತಿಂಗಳಿಗೆ ಬಿಡುಗಡೆ ಮಾಡಿದೆ. ಸೀಮೆಎಣ್ಣೆಯನ್ನು ನಿಗಧಿತ ದರದಲ್ಲಿ ಬೆಂಗಳೂರು ಮತ್ತು ಇತರೇ ಜಿಲ್ಲೆಗಳಲ್ಲಿ ನಿಗಧಿಪಡಿಸಿದ ಬೆಲೆಯನ್ನನುಸರಿಸಿ ವಿತರಣೆ ಮಾಡಲಾಗುತ್ತಿದೆ.

ಆ) ಅವ್ಯವಹಾರ ಮತ್ತು ಕಾಳಸಂತೆಯಲ್ಲಿ ಸೀಮೆಎಣ್ಣೆಯನ್ನು ಮಾರಾಟ ಮಡುವುದರ ವಿರುದ್ಧ ಅವಶ್ಯ ವಸ್ತುಗಳ ಕಾಯಿದೆ ಪ್ರಾಕಾರ ಶಿಕ್ಷಿಸಲಾಗುತ್ತಿದೆಯಲ್ಲದೆ ಅಂತಹವರ ಲೈಸೆನ್ಸ್‌ಗಳನ್ನು ವಜಾ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ನೇಸರಗಿ ಸರ್ಕಾರಿ ಪದವಿ ಕಾಲೇಜಿಗೆ ಡೆಸ್ಕ್, ಹಾಗೂ ಪೀಠೋಪಕರಣಗಳನ್ನು ಪೂರೈಸುವುದು

2207- ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ನೇಸರಗಿ ಸರ್ಕಾರಿ ಪದವಿ ಕಾಲೇಜು ಎಂದು ಪ್ರಾರಂಭವಾಯಿತು?

ಆ) ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು?

ಇ) ಈ ಪದವಿ ಕಾಲೇಜು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಡೆಸ್ಕುಗಳನ್ನು ಒದಗಿಸಿಲ್ಲವೆಂಬ ಸಂಗತಿ ನಿಜವೇ? ಹಾಗಿದ್ದಲ್ಲಿ ಡೆಸ್ಕುಗಳನ್ನು ಪೂರೈಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಈ ಪದವಿಪೂರ್ವಕಲೇಜು ಪ್ರಾರಂಭದಾಗಿನಿಂದ ಎಷ್ಟು ಪೀಠೋಪಕರಣಗಳನ್ನು ಒದಗಿಸಲಾಗಿದೆ?

ಉ) ಇಲ್ಲಿ ಪೀಠೋಪಕರಣಗಳ ಕೊರತೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ಅಫಿಲಿಯೇಷನ್ (ಮುಂದುವರಿಕೆ) ಈ ವರ್ಷ ಕೊಡುವ ಕಾಲಕ್ಕೆ ಯಾವ ಷರತ್ತುಗಳನ್ನು ಹಾಕಿದ್ದಾರೆ?

ಋ) ವಿಶ್ವವಿದ್ಯಾಲಯದವರು ಹಾಕಿದ್ದ ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ ಒಂದು ವೇಳೆ ಪೂರೈಸದೇ ಇದ್ದಲ್ಲಿ ಈ ಷರತ್ತುಗಳನ್ನು ಸರ್ಕಾರದವರು ದಿನದಲ್ಲಿ ಪೂರೈಸುವರು?

ೠ) ಈ ಕಾಲೇಜಿಗೆ ಎಷ್ಟು ಜವಾನರುಗಳ ಮಂಜೂರಾತಿ ಇದೆ? ಹಾಗೂ ಈಗ ಎಷ್ಟು ಜನ ಜವಾನರುಗಳ ಕೆಲಸ ಮಾಡುತ್ತಿದ್ದಾರೆ?

ಎ) ಒಂದು ವೇಳೆ ಜವಾನರುಗಳು ಇಲ್ಲಿಯವರೆಗೆ ಇಲ್ಲದೇ ಇದ್ದಲ್ಲಿ ಕೂಡಲೇ ಜವಾನರುಗಳನ್ನು ನೇಮಿಸಲು ಕ್ರಮ ಕೈಗೊಳ್ಳುವುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 1988-89

ಆ) ಒಂದು.

ಇ) ಸದರಿ ಕಾಲೇಜು ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡದಲ್ಲಿ ನಡೆಯುತ್ತಿರುವ ಕಾರಣ ಅಲ್ಲಿಯ ಪೀಠೋಪಕರಣಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಈ ವರ್ಷ ಡೆಸ್ಕುಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು.

ಈ) ಒದಗಿಸಿಲ್ಲ.

ಉ) ಸದರಿ ಕಾಲೇಜು ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡದಲ್ಲಿ ನಡೆಯುತ್ತಿರುವ ಕಾರಣ ಅಲ್ಲಿಯ ಪೀಠೋಪಕರಣಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಈ ವರ್ಷ ಡೆಸ್ಕ್‌ಗಳನ್ನು ಪೂರೈಸಲು ಅಗತ್ಯ ಬಿದ್ದಲ್ಲಿ ಕ್ರಮಕೈಗೊಳ್ಳಲಾಗುವುದು.

ಊ) ಆ) ದೈಹಿಕ ಶಿಕ್ಷಕರನ್ನು ಜೂನ್ 30ರೊಳಗೆ ನೇಮಿಸಬೇಕು.

ಆ) ಹೆಚ್ಚಿನ ಕಾರ್ಯಭಾರಕ್ಕನುಗುಣವಾಗಿ ಉಪನ್ಯಾಸಕರನ್ನು ನೇಮಿಸಬೇಕು.

ಇ) ರೂ.15,000 ಮೊತ್ತದ ಪುಸ್ತಕಗಳನ್ನು ಖರೀದಿಸಬೇಕು.

ಈ) ಈ ಕಾಲೇಜಿಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಪ್ರಯತ್ನಿಸಬೇಕು

ಉ) ಈ ಕಾಲೇಜಿಗೆ ರೂ.25,000 ಮೊತ್ತದ ಪೀಠೋರಪಕರಣ ಒದಗಿಸಬೇಕು.

ಋ) ಆ) ದೈಹಿಕ ಶಿಕ್ಷಕರ ನೇಮಕಾತಿ : ಆರ್ಥಿಕ ಮಿತವ್ಯಯ ಸಡಿಲಗೊಳಿಸಿದ ನಂಕರ ಕ್ರಮ ಕೈಗೊಳ್ಳಲಾಗುವುದು.

ಆ) ಉಪಾನ್ಯಸಕರ ನೇಮಕ : ಹಾಲಿ ಉಪನ್ಯಾಸಕರಿದ್ದಾರೆ. ಹೆಚ್ಚಿನ ಉಪನ್ಯಾಸಕರಿಗಾಗಿ ಪ್ರಸ್ತಾಪನೆ ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಇ) ಪುಸ್ತಕಗಳ ಪೂರೈಕೆ : ಈ ವರ್ಷ ಪೂರೈಸಲು ಕ್ರಮ ಕೈಗೊಳ್ಳಲಾಗುವುದು.

ಈ) ಕಾಲೇಜು ಕಟ್ಟಡ ನಿರ್ಮಾಣ: ಈ ವರ್ಷದಲ್ಲಿ ಕಟ್ಟಡಕ್ಕೆಂದು 13.50 ಲಕ್ಷ ರೂಪಾಯಿಗಳನ್ನು ಯೋಜನಾ ಆಯವ್ಯಯದಲ್ಲಿ ಒದಗಿಸಿದೆ. ಈ ವರ್ಷದಲ್ಲಿಯೇ ಕಟ್ಟಡ ನಿರ್ಮಾಣ ಪ್ರಾರಂಭಿಸಲು ಕ್ರಮ ತಗೆದುಕೊಳ್ಳಲಾಗುವುದು.

ಉ) ಪೀಠೋಪಕರಣ : ಈ ವರ್ಷ ಅಗತ್ಯ ಬಿದ್ದಲ್ಲಿ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಋ) 3 ಹುದ್ದೆಗಳು.

ಎ) ಆರ್ಥಿಕ ಮಿತವ್ಯಯದ ಕಾರಣ ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಆರ್ಥಿಕ ಮಿತವ್ಯಯ ಸಡಲಿಸಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಚಾಮರಾಜನಗರದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣವನ್ನು ಆಧುನಿಕರಣ ಗೊಳಿಸುವುದು

2273 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಾಮರಾಜನಗರದಲ್ಲಿರುವ ರಾಜ್ಯ ಸಾರಿಗೆ ಬಸ್ ನಿಲ್ದಾಣದ ಆವರಣದಲ್ಲಿ ನೈರ್ಮಲ್ಯ . ಹದಗೆಟ್ಟಿರುವುದು ಬಸ್ ನಿಲ್ದಾಣದ ನಿರ್ವಹಣೆ ಸರಿಯಿಲ್ಲದ ಕಾರಣ ಪ್ರಯಾಣಿಕರಿಗೆ ಸರಿಯಾದ ಅಗತ್ಯ ಸೌಲಭ್ಯಗಳಿಲ್ಲದೆ (ಉದಾ : ಕುಡಿಯುವ ನೀರು, ಶೌಚಾಲಯ, ಪ್ರಯಾಣಿಕರಿಗೆ ಕುಳಿತುಕೊಳ್ಳಲು ಸರಿಯಾದ ಆಸನದ ವ್ಯವಸ್ಥೆ ಇತ್ಯಾದಿ) ಪ್ರಯಾಣಿಕರು ತೊಂದರೆಗೊಳಗಾಗಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?